ಕರ್ನಾಟಕ ವಿಧಾನ ಸಭೆ

ಶುಕ್ರವಾರ 12ನೇ ಜುಲೈ 1996ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ರಮೇಶ್‌ಕುಮಾರ್ ಅವರು) ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ವಿಷಯ:- ಶಿವಮೊಗ್ಗ ಜಿಲ್ಲೆಯಲ್ಲಿ ಜಮೀನುಗಳಿಗೆ ಹಾಕುವ ಕೃಷಿ ಸುಣ್ಣಕ್ಕೆ ಸಹಾಯಧನ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 79 (593)

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ):- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1. 1995-96ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಜಮೀನುಗಳಿಗೆ ಹಾಕುವ ಕೃಷಿ ಸುಣ್ಣಕ್ಕೆ ನಿಗಧಿಯಾಗಿದ್ದ ಸಹಾಯಧನ ಎಷ್ಟು ಹಾಗೂ (ಬಳಸಿದ ಸಹಾಯಧನ ಎಷ್ಟು)

2. ಈ ಕುರಿತು ಯಾವ ವಿಜನ್ಸಿಗೆ ಸರಬರಾಜಿನ ಜವಾಬ್ದಾರಿ ನೀಡಲಾಗಿತ್ತು?

3. ಸಮರ್ಪಕ ಬಳಕೆ ಆಗದಿರುವುದಕ್ಕೆ ಕಾರಣವೇನು?

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):-

1. 1995-96ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಗೆ ಹುಳಿ ಮಣ್ಣು ಸುಧಾರಿಸಲು ಜಮೀನಿಗೆ ಹಾಕುವ ಕೃಷಿ ಸುಣ್ಣಕ್ಕೆ ನಿಗಧಿಯಾದ ಸಹಾಯಧನ ರೂ. 3.00 ಲಕ್ಷಗಳು. ಈ ಸಹಾಯಧನವನ್ನು ಬಳಸಲಾಗಿಲ್ಲ.

2. ಕರ್ನಾಟಕ ಕೃಷಿ ಕೈಗಾರಿಕಾ ನಿಗಮದವರಿಗೆ ಕೃಷಿ ಸುಣ್ಣ ಸರಬರಾಜು ಮಾಡಲು ಬೇಡಿಕೆ ಸಲ್ಲಿಸಲಾಗಿತ್ತು.

3. ಕರ್ನಾಟಕ ಕೃಷಿ ಕೈಗಾರಿಕಾ ನಿಗಮದವರು ಸಕಾಲದಲ್ಲಿ ಸರಬರಾಜು ಮಾಡದಿರುವುದೇ ಕಾರಣವಾಗಿದೆ.

10.10 ಎ.ಎಂ

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ಜಿಲ್ಲೆಯಲ್ಲಿ ಕೃಷಿ

ಹುಳಿಮಣ್ಣನ್ನು ಕ್ವಾರಗೊಳಿಸಿ ಉತ್ಪಾದನೆಯನ್ನು ಜಾಸ್ತಿ ಮಾಡುವ ದೃಷ್ಟಿಯಿಂದ ಕೃಷಿ ಇಲಾಖೆಯವರು 3 ಲಕ್ಷ ರೂಪಾಯಿಗಳ ಸಹಾಯಧನವನ್ನು ಕೊಟ್ಟು, ಸುಮಾರು 10 ಲಕ್ಷ ರೂಪಾಯಿಗಳ ಸುಣ್ಣವನ್ನು ನಮ್ಮ ಶಿವಮೊಗ್ಗ ಜಿಲ್ಲೆಯ ರೈತರ ಹೊಲಗಳಿಗೆ ಹಾಕಬೇಕಾಗಿತ್ತು. ಈವೊಂದು ಸರಬರಾಜನ್ನು ಕರ್ನಾಟಕ ಕೈಗಾರಿಕಾ ನಿಗಮದವರು ಸಕಾಲದಲ್ಲಿ ಪೂರೈಸಲಿಲ್ಲವೆಂದು ಹೇಳಿ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ಈವೊಂದು ಯೋಜನೆಯನ್ನು ಸರ್ಕಾರ ಯಾವ ಒಂದು ಸದುದ್ದೇಶದಿಂದ ಮಾಡಲಾಗಿತ್ತೋ, ಅದಕ್ಕೆ ತಿಲಾಂಜಲಿಯನ್ನು ಸಂಬಂಧಪಟ್ಟ ಇಲಾಖೆ ಮಾಡಿದೆ. ಇದರಿಂದ ಅಪಾರವಾದ ನಷ್ಟ ನಮ್ಮ ಒಂದು ಜಿಲ್ಲೆಗೆ ಸಂಬಂಧಿಸಿದ್ದು ಮಾತ್ರವಲ್ಲದೆ ಕರ್ನಾಟಕ ರಾಜ್ಯದಲ್ಲಿ ಕಳೆದ ಸಾಲಿನಲ್ಲಿ ಸಾಕಷ್ಟು ಕೃಷಿ ಸುಣ್ಣಕ್ಕೆ ಇರತಕ್ಕ ಸಬ್ಸಿಡಿ ಲ್ಯಾಪ್ಸ್ ಆಗಿ ಕೃಷಿಕರಿಗೆ ಇದನ್ನು ಪೂರೈಸಲಿಲ್ಲವೆನ್ನುವ ಮಾಹಿತಿ ನನ್ನಲ್ಲಿದೆ. ಬಹಳ ಅನುಭವಿಗಳಾದ ಮಾನ್ಯ ಕೃಷಿ ಸಚಿವರು ಇರುವಾಗ ಈ ಇಲಾಖೆ ಯೋಗ್ಯ ರೀತಿಯಲ್ಲಿ ಏತಕ್ಕೆ ಕೆಲಸ ಮಾಡುವುದಿಲ್ಲ? ಈ ಇಲಾಖೆಯಲ್ಲಿ ಕೈತುಂಬ ಸಂಬಳ, ಕಾರು, ಬಂಗಲೆ ಇದೆಲ್ಲಾ ಕೊಟ್ಟು ಅಧಿಕಾರಿಗಳನ್ನು ರಾಜಕುಮಾರರ ರೀತಿಯಲ್ಲಿ ಸಾಕಿದ್ದೇವೆ. ಅವರು ಸಮಯಕ್ಕೆ ಸರಿಯಾಗಿ ಸುಣ್ಣ ಪೂರೈಸಲಿಕ್ಕೆ ಆಗುವುದಿಲ್ಲ.

ಅಧ್ಯಕ್ಷರು:- ಮಾನ್ಯ ಸದಸ್ಯರು ಪ್ರಶ್ನೆ ಕೇಳಿ.

ಶ್ರಿ ಅರಗ ಜ್ಞಾನೇಂದ್ರ:- ಸುಣ್ಣ ಪೂರೈಸಲಿಕ್ಕೆ ಆಗದಿರುವಂತಹ ಒಂದು ಇಲಾಖೆಯನ್ನು ಮುಚ್ಚುವಂತಹ ಒಂದು ಇರಾದೆ ತಮಗೆ ಇದೆಯೋ ಅಥವಾ ಈವೊಂದು ನಷ್ಟವನ್ನು ರೈತರಿಗೆ ಯಾವ ರೀತಿ ಭರಿಸಿಕೊಡುತ್ತೀರಿ ಎನ್ನುವಂತಹ ವಿಚಾರವನ್ನು ದಯಮಾಡಿ ತಿಳಿಸಬೇಕು.

ಶ್ರೀ ಸಿ.ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಗಮನಕ್ಕೆ ತರತಕ್ಕದ್ದು ಏನೆಂದರೆ ಇದು ಶೇಕಡ 50:50 ರಿಯಾಯಿತಿ ದರದಲ್ಲಿ ಸುಣ್ಣವನ್ನು ಸರಬರಾಜು ಮಾಡತಕ್ಕದ್ದು. ಶೇಕಡ 50 ಭಾಗವನ್ನು ಯಾರು ರೈತರು ಇರುತ್ತಾರೆ ಅವರು ಮೊದಲು ತುಂಬಬೇಕು. ಆಮೇಲೆ ಸುಣ್ಣ ಸರಬರಾಜು ಆಗತಕ್ಕದ್ದು. ಅದನ್ನು ತುಂಬದಿದ್ದ ಪಕ್ಷದಲ್ಲಿ ಈ ಹಣ ಪೂರ್ತಿಯಾಗಿ ಖರ್ಚಾಗುವುದಿಲ್ಲ. ಇದನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಆ ನಾನಾ ಕಾರಣಗಳಿಂದ ಕೆಲವು ಸಂದರ್ಭಗಳಲ್ಲಿ ಈ ರಿಯಾಯಿತಿ ಹಣ ಖರ್ಚಾಗುವುದಿಲ್ಲ. ಇಲ್ಲಿ ಸ್ವಲ್ಪಮಟ್ಟಿಗೆ ಅದು ಆಗಿದೆ. ಸಕಾಲದಲ್ಲಿ ರೈತರು ಆ ಹಣವನ್ನು ತುಂಬದಿದ್ದರೆ, ಈ ರಿಯಾಯಿತಿ ಹಣವನ್ನು ಅವರಿಗೆ ತುಂಬಿಸಲಿಕ್ಕೆ ಆಗುವುದಿಲ್ಲ. ನಿಮ್ಮಲ್ಲಿ ಹೀಗಾಗಿರುವುದಕ್ಕೆ ಅದು ಸ್ವಲ್ಪ ಮಟ್ಟಿಗೆ ಕಾರಣ.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ರೈತರು ಈ ಹಣವನ್ನು ತುಂಬಿದ್ದಾರೆ. ಕೃಷಿ ಅಧಿಕಾರಿಗಳ ಹತ್ತಿರ ತಮ್ಮ ಭಾಗದ ಹಣವನ್ನು ಕೊಟ್ಟಿದ್ದರು. ನನ್ನ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಕೆಲವು ಕೃಷಿ ಅಧಿಕಾರಿಗಳು ಆ ಹಣವನ್ನು ವಾಪಸ್ಸು ಕೊಡದೆ ಅದೊಂದು ದೊಡ್ಡ ಹಗರಣವೇ ನಡೆದಿದೆ. ದಯಮಾಡಿ ತಮಗೆ

ತಪ್ಪು ಮಾಹಿತಿಯನ್ನು ಅಧಿಕಾರಿಗಳು ನೀಡಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಸಕಾಲದಲ್ಲಿ ಸುಣ್ಣವನ್ನು ಪೂರೈಸದಿರತಕ್ಕ ಆಗ್ರೋ ಇಂಡಸ್ಟ್ರೀಸ್ ಇಲಾಖೆ ಏನಿದೆ ಅದು ನಿಮ್ಮ ಅಧೀನದಲ್ಲಿ ಬರತಕ್ಕ ಇಲಾಖೆ, ಇಂತಹ ಅಧಿಕಾರಿಗಳ ಮೇಲೆ ಯೋಗ್ಯ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಸಿ.ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಲೋಪ ಮಾಡಿರತಕ್ಕ ಅಧಿಕಾರಿಗಳು ಯಾರಿದ್ದಾರೆ ಅಂತಹವರ ಮೇಲೆ ಮಾನ್ಯ ಸದಸ್ಯರಾದ ಅರಗ ಜ್ಞಾನೇಂದ್ರರವರು ಏನು ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತಾರೋ ಕಾನೂನಿನ ಅಡಿಯಲ್ಲಿ ಆ ಕ್ರಮವನ್ನು ಖಂಡಿತಾ ತೆಗೆದುಕೊಳ್ಳುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೆ, ಇಲಾಖೆಯ ವತಿಯಿಂದ ತೆಗೆದುಕೊಳ್ಳುವ ಕ್ರಮ ನಾನು ಸೂಚಿಸುವಂತಹದ್ದು ಅಲ್ಲ. ಮಾನ್ಯ ಮಂತ್ರಿಗಳು ಹೇಳಲಿ, ಕಾನೂನಿನ ಪ್ರಕಾರ ಯಾವ ಕ್ರಮ ತೆಗೆದುಕೊಳ್ಳಬೇಕು ಎನ್ನುವುದು ಗೊತ್ತಿದೆ.

ಶ್ರೀ ಸಿ.ಬೈರೇಗೌಡ:- ಅದಕ್ಕೇ ನಾನು ಹೇಳಿದ್ದು, ಕಾನೂನಿನಲ್ಲಿ ಏನು ಕ್ರಮ ಜರುಗಿಸುವುದಕ್ಕೆ ಸಾಧ್ಯವಿದೆ ಅದನ್ನು ಖಂಡಿತಾ ತೆಗೆದುಕೊಳ್ಳುತ್ತೇನೆ.

ಶ್ರೀ ಡಿ.ವಿ.ಸದಾನಂದಗೌಡ:- ಮಾನ್ಯ ಅಧ್ಯಕ್ಷರೆ, ಎರಡನೆಯ ಪ್ರಶ್ನೆ ಈ ಕುರಿತು ಯಾವ ಏಜೆನ್ಸಿಗೆ ಸರಬರಾಜಿನ ಜವಾಬ್ದಾರಿ ನೀಡಲಾಗಿತ್ತು ಎಂಬ ಪ್ರಶ್ನೆ ಕೇಳಿದ್ದಕ್ಕೆ ಕರ್ನಾಟಕ ಕೃಷಿ ಕೈಗಾರಿಕಾ ನಿಗಮದವರಿಗೆ ಕೃಷಿ ಸುಣ್ಣ ಸರಬರಾಜು ಮಾಡಲು ಬೇಡಿಕೆ ಸಲ್ಲಿಸಲಾಗಿತ್ತು ಮತ್ತು ಕರ್ನಾಟಕ ಕೃಷಿ ಕೈಗಾರಿಕಾ ನಿಗಮದವರು ಸಕಾಲದಲ್ಲಿ ಸರಬರಾಜು ಮಾಡದಿರುವುದೇ ಕಾರಣವಾಗಿದೆಯೆಂದು ಉತ್ತರ ಕೊಟ್ಟಿದ್ದಾರೆ. ಸಮಯಕ್ಕೆ ಸರಿಯಾಗಿ ರೈತರಿಗೆ ಸರಬರಾಜು ಆಗುವಂತಹ ಎಲ್ಲಾ ವಸ್ತುಗಳನ್ನು ಅದು ಸರಬರಾಜು ಆಗಿದೆಯೋ ಇಲ್ಲವೋ ಅದಕ್ಕೆ ಬೇಕಾದ ಹಣವನ್ನು ರೈತರು ಪಾವತಿ ಮಾಡಿದ್ದಾರೋ ಇಲ್ಲವೋ ಅಥವಾ ಸಬ್ಸಿಡಿಯ ಸದುಪಯೋಗವಾಗಿದೆಯೋ ಇಲ್ಲವೋ ಎಂದು ಹೇಳುವಂತಹ ವೆರಿಫಿಕೇಷನ್ ಮಾಡುವಂತಹ ವ್ಯವಸ್ಥೆಗಳು ಈ ಸರ್ಕಾರದಲ್ಲಿ ಇದೆಯೇ? ಸರ್ಕಾರದಲ್ಲಿದ್ದರೆ ಆ ಸಮಯಕ್ಕೆ ಏಕೆ ಅದನ್ನು ವೆರಿಫೈ ಮಾಡಲಿಲ್ಲ? ಈಗ ಇದೆಲ್ಲಾ ಆದಮೇಲೆ ಆಗ ರೈತರು ಕಟ್ಟಲಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದು ಸರಿಯೇ? ಇದರ ಬಗ್ಗೆ ಸರ್ಕಾರದವರು ಸ್ಪಷ್ಟೀಕರಣ ಕೊಡಬೇಕು.

MR.SPEAKER: It is improving now.

ಶ್ರೀ ಸಿ.ಬೈರೇಗೌಡ:- ಉತ್ತರ ಹೇಗೆ ಹೇಳಬೇಕೆಂದು ತಾವೇ ಹೇಳಿಬಿಟ್ಟರೆ ನಾನು ಹೇಳುತ್ತೇನೆ. ಅವರು ಕೇಳಿರತಕ್ಕದ್ದು ಸುಣ್ಣ, ಇವರು ಇಡೀ ಇಲಾಖೆಗೆ ಸಂಬಂಧಪಟ್ಟಿದ್ದನ್ನು ಕೇಳುತ್ತಿದ್ದಾರೆ. ಉತ್ತರ ಏನು ಹೇಳಬೇಕೆಂಬುದನ್ನು ತಾವು ನನಗೆ ಹೇಳಿಬಿಟ್ಟರೆ ಆ ಉತ್ತರ ಹೇಳಿಬಿಡುತ್ತೇನೆ.

ಶ್ರೀ ಡಿ.ವಿ.ಸದಾನಂದಗೌಡ:- ಆಗ್ರೋ ಇಂಡಸ್ಟ್ರೀಸ್ ನಡವಳಿಕೆ ನಮಗೆ ಹಾಗೆ ಕಾಣಿಸುತ್ತಿದೆ. ನಾನು ಕೇಳುವಂತಹದ್ದು ಸುಣ್ಣದ ಸರಬರಾಜಿನ ಬಗ್ಗೆ. ಆ ಸುಣ್ಣ ಸರಬರಾಜು ಸಕಾಲಕ್ಕೆ ಆಗಬೇಕೆಂದು ಹೇಳುವಂತಹ ಸಂದರ್ಭದಲ್ಲಿ ಆ ಸುಣ್ಣ ಸರಬರಾಜು ಆಗಲಿಲ್ಲ ಅಥವಾ ಮಾಡಲಿಲ್ಲ ಅಥವಾ ರೈತರು ಯಾರೂ ಕೇಳಲಿಲ್ಲ ನಾವು ಕೊಡಲಿಲ್ಲವೆಂದು ಹೇಳುವಂತಹದ್ದನ್ನು ನಿಗದಿತ ಸಮಯಕ್ಕೆ ಆ ಇಲಾಖೆ ಅಥವಾ ಸಂಬಂಧಪಟ್ಟ ಇಲಾಖೆ ವರಿಫೈ ಮಾಡಿದೆಯೇ? ಸರ್ಕಾರ ರೈತರ ಬಗ್ಗೆ ಎಷ್ಟು ಗಮನಹರಿಸುತ್ತದೆಂದು ಇದರಿಂದ ನಮಗೆ ಗೊತ್ತಾಗುತ್ತದೆ. ಇದೆಲ್ಲ ಆದಮೇಲೆ ನಾವು ಪ್ರಶ್ನೆ ಕೇಳಿದಾಗ ಇದನ್ನು ಹೇಳುತ್ತಿದ್ದಾರೆ. ಯಾವ್ಯಾವ ಸಂದರ್ಭದಲ್ಲಿ ಸಕಾಲಕ್ಕೆ ಅದು ಸರಬರಾಜು ಆಗದೇ ಇರಲಿಕ್ಕೆ ಏನು ಕಾರಣಗಳು ಎನ್ನುವುದನ್ನು ಹೇಳಬೇಕು.

MR.SPEAKER: You can note down this.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ತಾವು ನಿನ್ನೆ ದಿವಸ ಪ್ರಶ್ನೋತ್ತರ ವೇಳೆಯನ್ನು ಬಹಳ ದೂರ ಎಳೆದರು ಎಂದು ಹೇಳಿದಿರಿ, ಉಪ ಪ್ರಶ್ನೆಗಳು ಪ್ರಶ್ನೆಗೆ ಬಹಳ ಹತ್ತಿರವಿದ್ದರೆ ಸ್ವಲ್ಪ ಅನುಕೂಲವಾಗಬಹುದು. ಉದಾಹರಣೆಗೆ ಮಾನ್ಯ ಜ್ಞಾನೇಂದ್ರರವರು ಪ್ರಸ್ತಾಪ ಮಾಡಿದರು. ಅದು ನನಗೆ ಗೊತ್ತು, ನಮ್ಮ ಜಿಲ್ಲೆಯಿಂದ ಅದಕ್ಕೆ ಹಣ ಕಟ್ಟಿದರೂ ಸಹ ಕೃಷಿ ಇಲಾಖೆಯ ಅಧಿಕಾರಿಗಳು ಮಾಡಲಿಲ್ಲ ನಮ್ಮಲ್ಲಿ. ನಾನು ನಿಮಗೆ ಏತಕ್ಕೆ ಹೇಳುತ್ತಿದ್ದೇನೆಂದರೆ, ಕರ್ನಾಟಕ ಕೃಷಿ ಕೈಗಾರಿಕಾ ನಿಗಮ ನಿಮ್ಮ ಕೈಯಲ್ಲಿರುವಂತಹದ್ದು. ಈ ಕಾಲದಲ್ಲಿಯಾದರೂ ಉತ್ತರ ಕೊಡುವುದಾದರೆ ಕೊಡಿ ಇಲ್ಲದಿದ್ದರೆ ತಮ್ಮ ಗಮನಕ್ಕೆ ತೆಗೆದುಕೊಳ್ಳಿ. ಇದರ ಬಗ್ಗೆ ವಿಶೇಷವಾದ ಚರ್ಚೆ ಮಾಡೋಣ. ಕಂಬಳಿಹುಳದ ಹಾವಳಿ ದೊಡ್ಡ ಪ್ರಮಾಣದಲ್ಲಿತ್ತು. ನಾನು ಹೇಳುತ್ತೇನೆ ತಾವು ಅದಕ್ಕೆ ಉತ್ತರ ಕೊಡಬೇಡಿ. ಅದು ತಮ್ಮ ಗಮನದಲ್ಲಿರಲಿ, ಅದು ರೆಕಾರ್ಡ್‌ಗೆ ಹೋಗಲಿ. ಬಿಎಸ್‌ಸಿ ಪೌಡರ್ 10 ಪರ್ಸೆಂಟ್ ಕ್ರಿಮಿನಾಶಕ ಮುಕ್ತ ಮಾರುಕಟ್ಟೆಯಲ್ಲಿ 3700 ರೂಪಾಯಿಗೆ ಸಿಗುತ್ತದೆ. ತಮ್ಮ ಇಲಾಖೆಯಲ್ಲಿ 4600 ರೂಪಾಯಿಗೆ ಮಾರಾಟ ಮಾಡುತ್ತಿದ್ದೀರಿ. ನಿಮಗೆ ಎಷ್ಟು ಸಾವಿರ ಟನ್ ಬೇಕಾದರೂ ನಾನು ತಂದುಕೊಡುತ್ತೇನೆ. ನಾನು ಹೇಳುತ್ತೇನೆ, ಬಡವರಿಗೆ ಬೋರ್‌ವೆಲ್ ಕೊರೆಯತಕ್ಕದ್ದು 38-40 ರೂಪಾಯಿ ಒಂದು ಅಡಿಗೆ ಇದೆ. ನಿಮ್ಮವರು 75-80 ರೂಪಾಯಿ ಚಾರ್ಜ್ ಮಾಡುತ್ತಿದ್ದಾರೆ. ಇದರ ಬಗ್ಗೆ ಚರ್ಚೆ ಮಾಡೋಣ. ನಿಮ್ಮ ಇಲಾಖೆಯಲ್ಲಿ ಯಾವುದು ಸಬ್ಸಿಡಿ ಇದೆ ಅದು ಉಪಯೋಗವಾಗುತ್ತಿಲ್ಲ. ಇನ್ನೊಂದು ಕಡೆ ಒಂದಕ್ಕೆ ನಾಲ್ಕು ಪಟ್ಟು ಲೂಟಿಯಾಗುತ್ತಿದೆ.

ಅಧ್ಯಕ್ಷರು:- ಬೋರ್‌ವೆಲ್ ನೀವು ಹಾಕುವುದಿಲ್ಲ. ಕೃಷಿ ಸಚಿವರು ನೀವು ಮಾತನಾಡಬೇಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಸ್ವಾಮಿ, ನಾನು ನಿಮ್ಮ ಗಮನಕ್ಕೆ ತರುತ್ತೇನೆ, ಕೃಷಿ ಇಲಾಖೆ ವಿಶೇಷ ಘಟಕ ಯೋಜನೆಯ ಅಡಿಯಲ್ಲಿ ರೈತರಿಗೆ ಕೊಳವೆಬಾವಿಯನ್ನು ಕೊರೆಯುತ್ತಾರಲ್ಲಾ ಏಜೆನ್ಸಿಗೆ ಕೊಟ್ಟು 75ರಿಂದ 80 ರೂಪಾಯಿ ಒಂದು ಅಡಿಗೆ

ನಿಮ್ಮವರು ಚಾರ್ಜ್ ಮಾಡುತ್ತಿದ್ದಾರೆ. ಇವತ್ತು ಮಾಸಗಿಯವರು 35ರಿಂದ 36 ರೂಪಾಯಿ ಒಂದು ಅಡಿಗೆ ಕೊರೆಯುತ್ತಿದ್ದಾರೆ. ಪ್ರತಿಯೊಂದೂ ಈ ತರಹ ಆಗುತ್ತಿದೆಯೆಂದು ನಿಮಗೆ ನಾನು ಲೆಟರ್ ಬರೆದಿದ್ದೇನೆ.

ಅಧ್ಯಕ್ಷರು:- ಮಾನ್ಯ ವಿರೋಧಪಕ್ಷದ ನಾಯಕರೇ ತಾವು ಏನು ಹೇಳುತ್ತಿದ್ದೀರಿ. ಅದನ್ನು ಇನ್ನೊಂದು ಸಂದರ್ಭದಲ್ಲಿ ತಾವು ಹೇಳಿ. It is altogether a different subject.

ಶ್ರೀ ಬಿ.ಎಸ್. ಯಡಿಯೂರಪ್ಪ:- ಆ ಇಲಾಖೆಯೇ ಆ ರೀತಿ ಇದೆ. ಇದಕ್ಕೆ ಸಂಬಂಧ ಇಲ್ಲದಿದ್ದರೂ ಆ ಇಲಾಖೆಗೆ ಗಮನಕೊಟ್ಟರೆ ಒಳ್ಳೆಯದಾಗಬಹುದೇನೋ ಎಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ಬಿಎಸ್‌ಸಿ ಪೌಂಡರದ್ದು ತಾವು ಒಪ್ಪಿಕೊಳ್ಳುತ್ತೀರಿ ಎಂದು ಅಂದುಕೊಳ್ಳುತ್ತೇನೆ.

ಶ್ರೀ ಸಿ.ಬೈರೇಗೌಡ:- ಈಗ ನಾನು ಹೇಗೆ ಒಪ್ಪಿಕೊಳ್ಳಲಿ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ಹುಳಿ ಮಣ್ಣನ್ನು ಸುಧಾರಣೆ ಮಾಡಲಿಕ್ಕೆ ಈ ಸುಣ್ಣವನ್ನು ಬಳಸುವಂತಹದ್ದು ವಿಶೇಷವಾಗಿ ಮಲೆನಾಡಿನಲ್ಲಿದೆ. ನಮ್ಮ ಜಿಲ್ಲೆಯಲ್ಲಿಯೂ ಹಣ ಲ್ಯಾಪ್ಸ್ ಆಗಿರುವಂತಹದ್ದು ನಮ್ಮ ಗಮನಕ್ಕೆ ಬಂದಿದೆ. ಅಂದರೆ ಇದು ಸರ್ವವ್ಯಾಪಿ. ಎಲ್ಲಾ ಜಿಲ್ಲೆಂ್ಲಿ ಈ ರೀತಿಯಾಗುತ್ತದೆ ಅಂದರೆ ಸರ್ಕಾರ ಸರಿಯಾದ ಕ್ರಮವನ್ನು ತೆಗೆದುಕೊ್ಳ್ಳದಕ್ಕೆ ವಿಫಲವಾಗುತ್ತಿದೆಯೇನೋ ಎಂದು ಅನಿಸುತ್ತಿದೆ.

ಅಧ್ಯಕ್ಷರು:- ಯಾವುದೇ ಉಪ ಪ್ರಶ್ನೆ ಖಚಿತವಾಗಿರಬೇಕು. ಮಾನ್ಯ ಅರಗ ಜ್ಞಾನೇಂದ್ರರವರು ಪ್ರಶ್ನೆ ಕೇಳಿದಾಗ, ಅವರು ತೀರ್ಥಹಳ್ಳಿಯಲ್ಲಿ ಹಣ ಕಟ್ಟಿದರೂ ಕೂಡ ಕೆಲವರಿಗೆ ಈ ರಿಯಾಯಿತಿ ಸಿಕ್ಕಿಲ್ಲವೆಂದು ಹೇಳಿದರು. ನಮ್ಮಲ್ಲಿ ಆಗಿರಬಹುದು ಗಮನಕ್ಕೆ ಬಂದಿರಬಹುದು ಎಂದು ಹಾಗೆ ಸರ್ವವ್ಯಾಪಿಯಾಗಿ ಅಂದಾಜಿನ ಮೇಲೆ ಗುಮಾನಿಯ ಮೇಲೆ ಕೇಳಿದರೆ ಹೇಗೆ ಉತ್ತರ ಕೊಡಲಿಕ್ಕೆ ಸಾಧ್ಯ? ನಿಶ್ಚಿತವಾಗಿ ಇಂತಲ್ಲಿ ಇಂತಹ ಊರು ಎಂದು ಹೇಳಿದರೆ ಅದರ ಬಗ್ಗೆ ಸೂಕ್ತಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ:- ಮಾನ್ಯ ಅಧ್ಯಕ್ಷರೆ, ಕಾರವಾರ ಜಿಲ್ಲೆಯಲ್ಲಿ ಅಧಿಕೃತವಾದ ಹಣವನ್ನು ಸರ್ಕಾರವೇ ಕೊಡಬೇಕು. ಎಷ್ಟು ಲ್ಯಾಪ್ಸ್ ಆಗಿದೆ ಎನ್ನತಕ್ಕದ್ದನ್ನು, ಆದರೆ ಇದು ಕಾರವಾರ ಜಿಲ್ಲೆಯಲ್ಲಿಯೂ ಸಹ ಇದು ಲ್ಯಾಪ್ಸ್ ಆಗಿದೆ ಈ ಸುಣ್ಣಕ್ಕೆ ಕೊಡುವಂತಹ ಹಣ ಎನ್ನುವಂತಹದ್ದು ನಿಶ್ಚಿತ ಇದೆ. ಹಾಗಾಗಿ ನನ್ನ ಕಳಕಳಿ ಅಂದರೆ ನಮ್ಮ ಜಿಲ್ಲೆಯಲ್ಲಿದೆ; ಶಿವಮೊಗ್ಗ ಜಿಲ್ಲೆಯಲ್ಲಿಯೂ ಆಗಿದೆಯೆಂದರೆ ಇದರ ಬಗ್ಗೆ ಗಮನ ಎಲ್ಲೋ ಕಡಿಮೆಯಾಗುತ್ತಿದೆ ಎಂದು ಅನ್ನಿಸುತ್ತಿದೆ.

ಶ್ರೀ ಸಿ.ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ನನ್ನ ನೆನಪಿನಿಂದ ಈ ಪ್ರಶ್ನೆಗೆ ಉತ್ತರ ಕೊಡುತ್ತಿದ್ದೇನೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಹೋದವರ್ಷ ಸುಣ್ಣವನ್ನು ಯಾವ

ಪ್ರಮಾಣದಲ್ಲಿ ಇರಬೇಕಾಗಿತ್ತೋ ಆ ಪ್ರಮಾಣದಲ್ಲಿ ಸುಣ್ಣದ ಗುಣಮಟ್ಟ ಇಲ್ಲದೇ ಇರತಕ್ಕ ಸಬ್‌ಸ್ಟ್ಯಾಂಡರ್ಡ್ ಸುಣ್ಣವನ್ನು ಸರಬರಾಜು ಮಾಡಿದ್ದುದು ನಿಜ. ಅವರ ಮೇಲೆ ತಕ್ಷಣ ಕ್ರಮವನ್ನೂ ಕೂಡ ತೆಗೆದುಕೊಂಡಿದ್ದೇನೆ. ಮಾನ್ಯ ಸದಸ್ಯರು ಬೇರೆ ವಿಚಾರವನ್ನು ಹೇಳುತ್ತಿದ್ದಾರೆ ಅದನ್ನು ಗಮನಿಸುತ್ತೇನೆ. ಎಲ್ಲೆಲ್ಲಿ ಈ ತರಹ ಲೋಪವಾಗಿದೆಯೋ ಅದನ್ನು ಎಲ್ಲಾ ಸದಸ್ಯರು ಗಮನಕ್ಕೆ ತಂದರೆ ತಕ್ಷಣ ಕ್ರಮ ತೆಗೆದುಕೊಳ್ಳತಕ್ಕ ಕೆಲಸವನ್ನು ಮಾಡುತ್ತೇನೆ.

ವಿಷಯ:- ಬೆಂಗಳೂರಿನಲ್ಲಿ ಹೊಸದಾಗಿ ಸೇರ್ಪಡೆಯಾಗಿರುವ ಕಂದಾಯ ಪ್ರದೇಶಗಳಿಗೆ ಸಾರಿಗೆ ವ್ಯವಸ್ಥೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 77 (783)

ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹೊಸದಾಗಿ ಸೇರ್ಪಡೆಯಾಗಿರುವ ಕಂದಾಯ ಪ್ರದೇಶಗಳ ಕೇಂದ್ರ ಪ್ರದೇಶದಿಂದ ಶಾಲೆ ಮತ್ತು ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ ಅವರ ವಾಸಸ್ಥಳಗಳಿಂದ ಸಂಬಂಧಿಸಿದ ವಿದ್ಯಾಸಂಸ್ಥೆಗಳಿಗೆ ನಿಗದಿತ ಮಾರ್ಗದಲ್ಲಿ ಪ್ರತ್ಯೇಕವಾದ ಮತ್ತು ಸಮರ್ಪಕವಾದ ಸಾರಿಗೆ ಸೌಲಭ್ಯ ಕಲ್ಪಿಸಲಾಗುವುದೇ?

ಆ) ಹೊಸದಾಗಿ ಸೇರ್ಪಡೆಯಾಗಿರುವ ಕಂದಾಯ ಪ್ರದೇಶಗಳಿಂದ ಉದಾಹರಣೆಗಾಗಿ ಬನಶಂಕರಿ 3ನೇ ಹಂತ, ಬ್ಯಾಂಕ್ ಕಾಲೋನಿ, ಶ್ರೀನಗರ, ರಾಜೇಶ್ವರಿ ನಗರ, ಇತರೆ ಗ್ರಾಮಾಂತರ ಸ್ಥಳಗಳಿಂದ ನಾರ್ತ್ ರೋಡ್, ಬಸವನಗುಡಿ, ಜಯನಗರ 9ನೇ ಬ್ಲಾಕ್‌ಗಳಿಗೆ ಶಾಲಾ ಸಮಯಕ್ಕೆ ಅನುಗುಣವಾಗಿ ಶಾಲಾ ವಿದ್ಯಾರ್ಥಿಗಳಿಗೆ ಮಾತ್ರ ಬೆಳಿಗ್ಗೆ ಮತ್ತು ಸಾಯಂಕಾಲ ಶಾಲೆಗಳಿಗೆ ಅಧಿಕ ಸುತ್ತುವಳಿಗಳನ್ನು ಓಡಿಸುವುದು ಕಾರ್ಯಸಾಧ್ಯ ಹಾಗೂ ಸೂಕ್ತವಾಗಿರುವುದಿಲ್ಲವೆ?

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು):-

ಅ) ಇಲ್ಲ.

ಆ) ಇಲ್ಲ.

ಶ್ರೀ ಹೆಚ್.ಎನ್.ನಂಜೇಗೌಡ:- ಮಾನ್ಯ ಅಧ್ಯಕ್ಷರೆ, ನಾನು ಈಗ ಹೆಚ್ಚಿಗೆ ಪ್ರಶ್ನೆಯನ್ನು ಕೇಳವುದಿಲ್ಲ, ನನ್ನ ಪ್ರಶ್ನೆಗೆ ಇಲ್ಲವೆಂದು ಹೇಳಿದ್ದಾರೆ. ತಾವು ಪುನರ್ ಪರಿಶೀಲನೆ ಮಾಡಿ ಅವಶ್ಯಕತೆ ಇರುವ ಕಡೆ ಹೆಚ್ಚಿನ ಸರ್ವೆ ಮಾಡಿಸಿ, ಈಗ ನ್ಯಾಷನಲ್ ಕಾಲೇಜು ಬಹಳ ಹೆಸರುವಾಸಿ, ವಿಜಯಕಾಲೇಜು ಬಹಳ ಹೆಸರುವಾಸಿ. ಆ ಕಾಲೇಜುಗಳಿಗೆ ಶ್ರೀನಗರ, ಬ್ಯಾಂಕ್ ಕಾಲೋನಿ ಇಂತಹ ಪ್ರದೇಶಗಳಿಂದ ವಿದ್ಯಾರ್ಥಿಗಳು ಬರುತ್ತಾರೆ. ತೀರಾ ಅನಿವಾರ್ಯವೆಂದು ಕಂಡ ಕಡೆ ಇದನ್ನು ಪರಿಶೀಲಿಸಬೇಕೆಂದು ನಾನು ಕೇಳುತ್ತೇನೆ.